ಬೀಳಗಿ ಕ್ಷೇತ್ರದಲ್ಲಿ ನೀರಾವರಿ ಯೋಜನೆ.

೧೪೩೧. ಶ್ರೀ ಬಾಬುರೆಡ್ಡಿ ವೆಂ. ತಂಗಳ (ಬೀಳಗಿ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೧ ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕಿನ ೩೩ ಹಳ್ಳಿಗಳನ್ನೊಳಗೊಂಡ ಬೀಳಗಿ ಕ್ಷೇತ್ರದಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ನಿಗಧಿತವಾಗಿ ಪೂರ್ತಿಗೊಂಡ ಯೋಜನೆಗಳೆಷ್ಟು ? (ವಿವರ ಒದಗಿಸುವುದು)

ಇ) ಇವುಗಳಿಗಾಗಿ ಖರ್ಚು ಮಾಡಿರುವ ಒಟ್ಟು ಹಣ ವೆಷ್ಟು ?

ಈ) ಈ ಎಲ್ಲಾ ಯೋಜನೆಗಳಿಂದ ನೀರಾವರಿ ಪ್ರಯೋಜನ ಪಡೆದಿರುವ ಪ್ರದೇಶ ಎಷ್ಟು ?

ಉ) ಪ್ರಸಕ್ತ ವರ್ಷ ಎಷ್ಟು ಯಾತ ನೀರಾವರಿ ಹಾಗೂ ನೀರಾವರಿ ಕೆರೆಗಳ ನಿರ್ಮಾಣ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೭

ಆ) ಒಂದು. ಯಾವುದೆಂದರೆ ಸಾವಳಗಿ ಗ್ರಾಮದ ರೇವಣ ಸಿದ್ದಪ್ಪ ದೇವಸ್ಥಾನದ ಹತ್ತಿರ ಕುರುಗೋಳ ಹಳ್ಳಕ್ಕೆ ಬಾಂದಾರ ಕೆಲಸ.

ಇ) ೫೭,೭೮೭ ರೂಪಾಯಿಗಳು (ಪೂರ್ತಿಯಾದ ಬಾಂದಾರದ ಕೆಲಸಕ್ಕೆ)

೩.೩೧ ಲಕ್ಷ ರೂಪಾಯಿಗಳು (ಎಲ್ಲಾ ಏಳು ಕೆಲಸಗಳಿಗೆ)

ಈ) ೪೯ ಹೆಕ್ಟೇರುಗಳು.

ಉ) ೧೯೮೬-೮೭ರ ಆಯವ್ಯಯದಲ್ಲಿ ಒಂದು ಸಣ್ಣ ನೀರಾವರಿ ಕೆರೆ ಮತ್ತು ಒಂದು ಏತ ನೀರಾವರಿ ಯೋಜನೆಗಳನ್ನು ಸೇರಿಸಲಾಗಿದೆ.

ಗಂಗಾವತಿ ತಾಲ್ಲೂಕಿನಲ್ಲಿ ಕಾಲುವೆ ಮತ್ತು ರಸ್ತೆಗಳ ನಿರ್ಮಾಣದ ಬಗ್ಗೆ.

೧೪೧೨. ಶ್ರೀ ಶ್ರೀರಂಗ ದೇವರಾಯಲು (ಕನಕಗಿರಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಕಾಲುವೆ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಸುಮಾರು ೨೫ ವರ್ಷಗಳ ಹಿಂದಿನಿಂದಲೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಧನ ಈವರೆಗೂ ಮಂಟ್ಟದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಪರಿಹಾರ ಧನವನ್ನು ಯಾವಾಗ ಕೊಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ನಿಯಮಾವಳಿ ಪ್ರಕಾರ ಪ್ರಕರಣಗಳ ನಿಷ್ಕರ್ಷೆಯಾದಂತೆ ಪರಿಹಾರವನ್ನು ನೀಡಲಾಗುವುದು

ತುಂಗಭದ್ರಾ ನದಿಯ ನೀರನ್ನು ಕೋಲಾರ ಜಿಲ್ಲೆಯಲ್ಲಿ ಹರಿಯುವ ನದಿಗಳಿಗೆ ಕೂಡಿಸುವ ಯೋಜನೆ.

೧೪೨೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಪಶ್ಚಿಮಕ್ಕೆ ಅರಬ್ಬಿ ಸಮುದ್ರದ ಕಡೆ ಹರಿಯುವ ಜೀವ ನದಿಗಳನ್ನು ಬರಪೀಡಿತ ಪೂರ್ವದ ಕಡೆಯ ಜಿಲ್ಲೆಯ ನದಿಗಳಿಗೆ ಕೂಡಿಸುವ ಬಗ್ಗೆ ಸರ್ಕಾರದ ಯೋಜನೆಯಿದೆಯೆ ?

ಆ) ತುಂಗಭದ್ರಾ ನೀರನ್ನು ಕೋಲಾರದಲ್ಲಿ ಹರಿಯುವ ನದಿಗಳಿಗೆ ಕೂಡಿಸುವ ಯೋಜನೆ ಯಾವ ಹಂತದಲ್ಲಿದೆ ?

ಇ) ಬರಪರಿಹಾರಕ್ಕೆ ಶಾಶ್ವತ ಪರಿಹಾರವಾಗುವ ನದಿಗಳ ಕೂಡಿಸುವ ಯೋಜನೆಯನ್ನು ಸರ್ಕಾರದವರು ಯಾಕೆ ಶೀಘ್ರವಾಗಿ ಮಾಡುತ್ತಿಲ್ಲ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

(ಅ ಇಂದ ಇ ವರೆಗೆ) ಕೆಲವು ಯೋಜನೆಗಳು ಇನ್ನೂ ಅನ್ವೇಷಣಾ ಹಂತದಲ್ಲಿವೆ.

ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆ ಬಗ್ಗೆ.

೭೨೪. ಶ್ರೀ ಜಿ. ರಾಜೂಗೌಡ (ಹಪೂರು).—ಮಾನ್ಯ ಸಣ್ಣ ಉಳಿತಾಯಗಳು ಹಾಗೂ ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯ ಪ್ರಗತಿಯ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಆ) ೧೯೮೫-೮೬ರ ಗುರಿ ಹಾಗೂ ಸಾಧಿಸಿರುವುದು ಎಷ್ಟು ?

ಇ) ಇದನ್ನು ಜನತಾ ಆಂದೋಲನವನ್ನಾಗಿ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ರಾಷ್ಟ್ರೀಯ ಉಳಿತಾಯ ಯೋಜನೆಯ ಪ್ರಗತಿಯ ಬಗ್ಗೆ ಈ ಕೆಳಕಂಡ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೧) ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಮಂತ್ರಿಗಳೂ ವಿಧಾನ ಸಭಾ ಮತ್ತು ಪರಿಷತ್ತಿನ ಅಧ್ಯಕ್ಷರುಗಳೂ, ಉಪಾಧ್ಯಕ್ಷರುಗಳಿಗೊಂಡು ಎಲ್ಲಾ ಶಾಸಕರುಗಳನ್ನು ಸಣ್ಣ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವಂತೆ ಅವರುಗಳ ಮನ ಒಲಿಸಿ ಉಳಿತಾಯ ಮಾಡಿಸುತ್ತಿದ್ದೇವೆ.

೨) ರಾಜ್ಯದಲ್ಲಿನ ಎಲ್ಲಾ ಗ್ರಾಮಗಳನ್ನು ಬಚತ್ ಗ್ರಾಮಗಳನ್ನಾಗಿ ಮಾಡಿ ಗ್ರಾಮದ ಎಲ್ಲಾ ಕಂಟುಂಬಗಳನ್ನು ಸಣ್ಣ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವಂತೆ ಕ್ರಮ ಕೈಗೊಳ್ಳಲಾಗಿದೆ.

೩) ರಾಜ್ಯದಲ್ಲಿನ ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾದ ಪ್ರಚಾರ ಮತ್ತು ಪ್ರಸಾರಗಳ ಮೂಲಕ ಜನ ಸಾಮಾನ್ಯರ ಮನ ಒಲಿಸಿ ಸಣ್ಣ ಉಳಿತಾಯದ ಒಂದಲ್ಲ ಒಂದು ಯೋಜನೆಯಲ್ಲಿ ಪ್ರತಿಯೊಂದು ಕಂಟುಂಬದವರು ಹಣ ತೊಡಗಿಸುವಂತೆ ಮನವಿ ಮಾಡಿ ಕೊಳ್ಳಲಾಗಿದೆ.

೪) ರಾಜ್ಯದಲ್ಲಿ ಹೆಚ್ಚು ಹೆಚ್ಚು ಅಧಿಕೃತ ಏಜೆಂಟರುಗಳನ್ನು ನೇಮಿಸಿ ಅವರ ಮುಖಾಂತರ ಸಣ್ಣ ಉಳಿತಾಯದಲ್ಲಿ ಹಣ ಸಂಗ್ರಹಿಸುವಂತೆ ಕ್ರಮ ಕೈಗೊಳ್ಳಲಾಗಿದೆ.

೫) ಸರ್ಕಾರಿ ಮತ್ತು ಸರ್ಕಾರೇತರ ನೌಕರರ ಮತ್ತು ಕಾರ್ಮಿಕರ ಮನ ಒಲಿಸಿ ವೇತನ ಪಟ್ಟಿ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವಂತೆ ವ್ಯವಸ್ಥೆ ಮಾಡಲಾಗಿದೆ.

೬) ಸಂಘ ಸಂಸ್ಥೆಗಳು ಏಜೆನ್ಸಿ ತೆಗೆದುಕೊಳ್ಳುವಂತೆ ಪ್ರಯತ್ನಿಸಲಾಗುತ್ತಿದೆ.